ಅಧ್ಯಾಪಕರು ಹೇಳುವ ಎಷ್ಟೋ ಪಾಠಗಳನ್ನು ಅವರಿಬ್ಬರೂ ಸಂಜೆಯ ಹೊತ್ತು ನನಗೆ ಮತ್ತೆ ಹೇಳಿಕೊಡುತ್ತಿದ್ದರು. ಒಂದು ದಿನ ಗಿರಡ್ಡಿ, ಮರುದಿನ ಪಿಎಂ ತಮ್ಮ ನೋಟ್‌ಬುಕ್ ಕೊಡುತ್ತಿದ್ದರು. ಅವನ್ನು ನಾನು ಮತ್ತೊಂದು ನೋಟ್‌ಬುಕ್ಕಿನಲ್ಲಿ ಶಿಸ್ತಿನಿಂದ ಬರೆದುಕೊಂಡು ಮರಳಿಸುತ್ತಿದ್ದೆ. ಅದರ ಪರಿಣಾಮವಾಗಿ ಅವರಿಬ್ಬರಿಗಿಂತ ಹೆಚ್ಚು ಸಲ ಓದಿದ, ಬರೆದುಕೊಂಡ ಅನುಭವ ನನಗೆ ಸಿಕ್ಕಿದ್ದರಿಂದ ನಾನು ಬಿ.ಎ. ಮೊದಲ ವರ್ಗದಲ್ಲಿ ಪಾಸಾದೆ, ಅವರು ಎರಡನೆಯ ವರ್ಗದಲ್ಲಿ ಪಾಸಾದರು. ಕ್ರೋಚೆ, ಎಲ್. ಅಬರ್‍ಕ್ರಾಂಬಿ, ಡಬ್ಲ್ಯೂ.ಎಚ್. ಹಡ್ಸನ್, ಟಿ.ಎಸ್. ಎಲಿಯಟ್, ವರ್ಡ್ಸ್‌ವರ್ಥ್ ಮುಂತಾದವರ ಕಾವ್ಯಸಿದ್ಧಾಂತಗಳನ್ನು ಪಿ.ಎಂ. ಹೆಗಡೆಗಿಂತ ಚೆಂದವಾಗಿ, ಸ್ಪಷ್ಟವಾಗಿ ನನಗೆ ತಿಳಿಸಿದವನು ಗಿರಡ್ಡಿ.

ಈ ಮಧ್ಯೆ ಕೆಲ ಸಮಯ ಕಳೆದ ಅನಂತರ ವಿಶ್ವವಿದ್ಯಾಲಯದವರು ಹಿಂದಿಯನ್ನು ಪ್ರಿನ್ಸಿಪಲ್ ಆಗಿ ಕೊಡುವ ಬಗ್ಗೆ ಸಕಾರಾತ್ಮಕ ನಿರ್ಣಯ ತೆಗೆದುಕೊಂಡರು. ಅದುವರೆಗೆ ಇಂಗ್ಲಿಷ್ ಓದುತ್ತಿದ್ದ ನಾನು ಈಗ ವಿಶೇಷ ಅನುಮತಿಯೊಂದಿಗೆ ಹಿಂದೀ ತೆಗೆದುಕೊಂಡೆ. ಅನಂತರವೂ ನಾವೆಲ್ಲರೂ ಕಂಪಲ್ಸರಿ ಮತ್ತು ಸಬ್‌ಸಿಡಿಯರಿ ಕ್ಲಾಸುಗಳಲ್ಲಿ ಕೂಡಿಯೇ ಇರುತ್ತಿದ್ದೆವು, ಕೂಡಿಯೇ ಓದುತ್ತಿದ್ದೆವು. ಅಷ್ಟೊತ್ತಿಗಾಗಲೇ ಅನೇಕ ಹಿಂದೀ ಪರೀಕ್ಷೆಗಳನ್ನು ಪಾಸಾಗಿದ್ದ ನನಗೆ ಹಿಂದೀ ಸರಳವೆನಿಸುತ್ತಿತ್ತು; ಆದರೂ ಆ ಕ್ಲಾಸಿನಲ್ಲಿ ಹೋಗತೊಡಗಿದಾಗಿನಿಂದ ಆ ವಿಭಾಗದ ಮುಖ್ಯಸ್ಥರು, ಮತ್ತು ಕೆಲ ಇತರರಿಂದ ನನಗೆ ತೊಂದರೆಯಾಗತೊಡಗಿತ್ತು. ಆದರೆ, ಈ ಹಂತದಲ್ಲಿ ನಾನು ಮರಳಿ ಬರಲಾರದಷ್ಟು ದೂರ ಸಾಗಿಬಿಟ್ಟಿದ್ದೆ. ಆಗ ಸಹ ನಾವು ದಿನಾಲೂ ಲೈಬ್ರರಿಯಲ್ಲಿ ಕೂಡಿಯೇ ಓದುವ ಪದ್ಧತಿ ಇಟ್ಟುಕೊಂಡಿದ್ದೆವು. ಅಲ್ಲಿಂದ ಕೂಡಿಯೇ ಹೆಮ್ಮಾಡಿಯ ಕ್ಯಾಂಟೀನಿನಲ್ಲಿ ಚಹ ಕುಡಿಯುತ್ತಿದ್ದೆವು. ಅಂಥ ಒಂದು ಸಂದರ್ಭದಲ್ಲಿ ಗಿರಡ್ಡಿ ನನಗೆ ಸಮಾಧಾನ ನೀಡಿದ್ದಲ್ಲದೇ, ಒಂದು ಉಪಾಯ ಹೇಳಿದ್ದ. “ಸದ್ಯ ಬಿ.ಎ. ಮಾಡೋಣ, ಇದಾದ ತಕ್ಷಣ ಎಂ.ಎ. ಮಾಡಲು ಬಾಂಬೇ ಯುನಿವರ್ಸಿಟಿಗೆ ಹೋಗೋಣ, ನನ್ನ ಅಣ್ಣ ಚನಬಸಣ್ಣನೂ ಇದೇ ಸಲಹೆ ನೀಡಿದ್ದಾನೆ” ಅಂದಿದ್ದ. ಆದರೆ, ಬಿ.ಎ. ಅನಂತರ ನಾವು ಮತ್ತೆ ಧಾರವಾಡದಲ್ಲಿಯೇ ಮುಂದಿನ ಓದಿಗೆ ನಿಂತುಕೊಂಡೆವು. ಅಷ್ಟೊತ್ತಿಗೆ ಗಿರಡ್ಡಿಯ ವಿಚಾರ ಬದಲಾಗಿತ್ತು. “ಇಲ್ಲಿಯ ಲೈಬ್ರರಿ ಬಹಳ ಚೆನ್ನಾಗಿದೆ, ಇಂಥದನ್ನು ಬಿಟ್ಟು ಹೇಗೆ ಹೋಗುವುದು?” ಎಂದ. ಅಷ್ಟರ ಮಟ್ಟಿಗೆ ಕರ್ನಾಟಕ ಕಾಲೇಜಿನ ಗ್ರಂಥಾಲಯ ಮತ್ತು ಧಾರವಾಡದ ಸಾಂಸ್ಕೃತಿಕ ವಾತಾವರಣದ ಬಗ್ಗೆ ಮೋಹ ಬೆಳೆಸಿಕೊಂಡಿದ್ದ.

ನಾವು ‘ಸ್ನೇಹಕುಂಜ’ ಹೆಸರಿನಲ್ಲಿ ಪ್ರತಿ ರವಿವಾರ ಸಂಜೆ ಕೂಡುತ್ತಿದ್ದೆವು. ಮೊದಲ ಸಲ ಚಂಪಾ ಇರುತ್ತಿದ್ದ ಭಾಗೀರಥಿ ಹಾಸ್ಟೆಲ್‌ದಲ್ಲಿ, ಎರಡನೆಯ ಸಲ ಗಿರಡ್ಡಿ ರೂಂ ಮಾಡಿದ್ದ ಲೋಕೂರ ಬಿಲ್ಡಿಂಗ್‌ದಲ್ಲಿ ಕೂಡಿದ್ದೆವು. ಅನಂತರ ನಿಯಮಿತವಾಗಿ ನಾನು ಹಿಂದೀ ಕ್ಲಾಸ್ ನಡೆಸುತ್ತಿದ್ದ ಸುಭಾಸ ಬಿಲ್ಡಿಂಗಿನಲ್ಲಿ ಕೂಡುತ್ತಿದ್ದೆವು. ಆಗ ನಮ್ಮ ಹೊಸ ಬಗೆಯ ಕವಿತೆಗಳ ವಾಚನ ಮತ್ತು ವಿಮರ್ಶೆ ನಡೆಯುತ್ತಿತ್ತು. ಬಿ.ಟಿ. ದೇಸಾಯಿ, ಗಿರಡ್ಡಿ ಮನಸ್ಸುಗೊಟ್ಟು ಆಲಿಸುತ್ತಿದ್ದರು, ಆಧುನಿಕ ಇಂಗ್ಲಿಷ್ ಕವಿಗಳ ಅನೇಕ ಉದಾಹರಣೆಗಳ ಜೊತೆಗೆ ಮುಕ್ತ ಟೀಕೆ ಮಾಡುತ್ತಿದ್ದರು. ಚಂಪಾ ಹಾಗೂ ನಾನು ಅವರ ಸಲಹೆ, ಆಘಾತಕರ ಟೀಕೆಗಳಿಂದ ಬಹಳ ತಿದ್ದಿಕೊಂಡಿದ್ದೇವೆ. ನಮ್ಮ ಪರೀಕ್ಷೆಗಳು ಹತ್ತಿರ ಬಂದಾಗ ಗಿರಡ್ಡಿಯೇ ಮುಂದಾಗಿ ಯೋಚಿಸಿ ನಮ್ಮ ಸ್ನೇಹಕುಂಜದ ಸಮಾರೋಪ ಆಯೋಜಿಸಿದ್ದ. ಅದಕ್ಕೆ ಪ್ರಿನ್ಸಿಪಾಲ್ ಆರ್ಮಾಂದೊ ಮೆನೆಝೆಸ್, ಪ್ರೊ. ಎಸ್.ಆರ್. ಮಳಗಿ, ಸಿದ್ದಣ್ಣ ಮಸಳಿ, ಸಿ.ಎಸ್. ಕಣವಿ ಅವರನ್ನು ಆಮಂತ್ರಿಸಿದ್ದ. ಕುಂಜದ ಸದಸ್ಯರಾದ ಚಂಪಾ, ಗಿರಡ್ಡಿ, ಇಮ್ರಾಪುರ, ಪಿ.ಎಂ. ಹೆಗಡೆ, ಬಿ.ಟಿ. ದೇಸಾಯಿ ಮತ್ತು ನಾನು ಇದ್ದೆವು, ಅಂದು ಬಿ.ಟಿ. ದೇಸಾಯಿಯ ಗೆಳೆಯ ಕಂಬಾರನೂ ಬಂದಿದ್ದ. ಎಲ್ಲರೂ ಕಾವ್ಯವಾಚನ ಮಾಡಿದ್ದೆವು. ಹೀಗೆ ನಮ್ಮ ಕವಿತೆಗಳನ್ನು ವಿಮರ್ಶಿಸುತ್ತ, ಸ್ವತಃ ತನ್ನ